॥ಓಂ ಶ್ರೀ ಗುರುಬಸವಲಿಂಗಾಯನಮಃ ॥

# ಬಸವಪಥ

# BASAVAPATHA

ಮಾಸಿಕ/Monthly

ಫೆಬ್ರವರಿ ೨೦೧೭ | ಆಱನೆಯ ಸಂಚಿಕೆ ಬಿಡಿ ಪ್ರತಿ ₹೧೫/- | ISSN 2348-425X



ಬಸವಪಥ-ಲಿಂಗಪಥ

Scanned with CamScanner

॥ ಶ್ರೀ ಗುರು ಬಸವಲಿಂಗಾಯ ನಮಃ ॥



# ಬಸವಪಥ

ಶ್ರೀ ಬಸವೇಶ್ವರರು ಹಾಗೂ ಇತರ ಶರಣರ ಜೀವನ ಹಾಗೂ
ಸಂದೇಶಗಳ ಪ್ರಚಾರಕ್ಕಾಗಿ ಮೀಸಲಾದ ಮಾಸಿಕ.


| | | |
|---|---|---|
| ಸಂಪುಟ | : | ೩೯ |
| ಸಂಚಿಕೆ | : | ೧೧ |
| ಫೆಬ್ರವರಿ | : | ೨೦೧೭ |
| ಪುಟ | : | ೮೮ |
| ಪುಸ್ತಕದ ಅಳತೆ | : | ೧/೮ ಡೆಮ್ಮಿ |


ಚನ್ನಬಸವನೆಂಬ ಪ್ರಸಾದಿಯ ಪಡೆದು
ಅನುಭವಮಂಟಪವನನುವು ಮಾಡಿ
ಅನುಭವ ಮೂರ್ತಿಯಾದ ನಮ್ಮ ಬಸವಯ್ಯನು.
-ನೀಲಮ್ಮ


**ಬಸವಪಥ**

ಬಸವ ಭವನ, ಶ್ರೀ ಬಸವೇಶ್ವರರಸ್ತೆ, ಬೆಂಗಳೂರು-560 001
ದೂ : 080-22355953, 22265505
email : basavasamithi.india@gmail.com


Scanned with CamSca

## ▶ ಅನುಕ್ರಮಣಿಕೆ


■ ಅಧ್ಯಕ್ಷರ ನುಡಿ ... ೬

■ ಲಿಂಗಾಷ್ಟಕಂ ... ೧೦
✍ ಪೂಜ್ಯ ಶ್ರೀ ಕುಮಾರನಿಜಗುಣ ಸ್ವಾಮಿಗಳು

■ ಇಷ್ಟಲಿಂಗೋಪಾಸನೆ ... ೧೨
✍ ಪೂಜ್ಯ ಶ್ರೀ ಶ್ರೀ ಇಮ್ಮಡಿ ಶಿವಬಸವಸ್ವಾಮಿಗಳು

■ ಇಷ್ಟಲಿಂಗಾರ್ಚನೆಯ ವಿಧಾನ ... ೨೫
✍ ಪೂಜ್ಯ ಶ್ರೀ ಸಿದ್ಧರಾಮೇಶ್ವರ ಶರಣರು

■ ಇಷ್ಟಲಿಂಗದೀಕ್ಷೆ ... ೩೫
✍ ಡಾ.ಎಸ್.ಆರ್. ಗುಂಜಾಳ್

■ ಇಷ್ಟಲಿಂಗ ರಹಸ್ಯ ... ೪೨
✍ ಅಂಬಾರಾಯ ಎಸ್. ಬಿರಾದಾರ್

■ ಸಮಗ್ರ ಕ್ರಾಂತಿಗೆ ಕರೆನೀಡುವ ಇಷ್ಟಲಿಂಗ ... ೫೪
✍ ರಂಜಾನ್ ದರ್ಗಾ

■ ಮಂಡಗೆ : ಬಸವಣ್ಣನವರ ಪೂರ್ವಜರ ಗ್ರಾಮ ... ೬೦
✍ ಡಾ. ವೀರಣ್ಣ ದಂಡೆ, ಡಾ. ಜಯಶ್ರೀ ದಂಡೆ

■ ಅಕ್ಕಮಹಾದೇವಿ ಮತ್ತು ಮೀರಾಬಾಯಿ : ಒಂದು ತೌಲನಿಕ ಅಧ್ಯಯನ ... ೭೦
✍ ಡಾ. ದಾಕ್ಷಾಯಣಿ ಯಡಹಳ್ಳಿ

■ ತಿರುಕ್ಕುರಳ್ ಮತ್ತು ಕನ್ನಡ ಸಾಹಿತ್ಯ ... ೭೮
✍ ಡಾ. ಸಿ.ಟಿ. ಜಯಣ್ಣ

# ತಿರುಕ್ಕುರಳ್ ಮತ್ತು ಕನ್ನಡ ಸಾಹಿತ್ಯ

ಡಾ. ಸಿ.ಟಿ. ಜಯಣ್ಣ
ಸಹಾಯಕ ಪ್ರಾಧ್ಯಾಪಕರು
ಎಸ್ ಜೆ ಎಮ್ ಕಾಲೇಜ್
ಚಂದ್ರವಳ್ಳಿ, ಚಿತ್ರದುರ್ಗ–577 502

ತಮಿಳುನಾಡಿನ ತಿರುವಳ್ಳುವರ್, ಕನ್ನಡ ನಾಡಿನ ಬಸವಣ್ಣ, ಸರ್ವಜ್ಞ ಮೊದಲಾದ ಶರಣಕುಲದವರು ಬದುಕಿನ ಅನುಭವಗಳನ್ನು ಮಾನವಕುಲದ ಕಲ್ಯಾಣಕ್ಕೆ ಬಳಸಿಕೊಂಡರು. ಇವರು ಬಾಳಿ ಬದುಕಿದ ಕಾಲ, ದೇಶ, ಭಾಷೆ ಬೇರೆ ಬೇರೆಯಾದರೂ ಅವರ ಆಲೋಚನೆ, ಚಿಂತನೆಗಳಲ್ಲಿ ಏಕತೆಯಿದೆ. ಹಿಂದಿನಿಂದಲೂ ಸಮಾಜದಲ್ಲಿ ಬೇರೂರಿರುವ ಕುಲಭೇದ, ಅಜ್ಞಾನ, ಹಿಂಸೆ ಮೊದಲಾದ ದುಷ್ಟ ಶಕ್ತಿಗಳನ್ನು ಕಿತ್ತೊಗೆಯುವ ಕಳಕಳಿ ಇದೆ.

ತಿರುವಳ್ಳುವರ್ ರಚಿಸಿದ 'ತಿರುಕ್ಕುರಳ್' ತಮಿಳು ಜನರಿಗೆ ಅತ್ಯಂತ ಪ್ರಿಯವಾದ ನೀತಿ ಪ್ರತಿಪಾದಕ ಕೃತಿ. ಎಲ್ಲ ಮತ ಧರ್ಮಗಳ ಸಾರವನ್ನು ಅಡಕವಾಗಿ ಹೇಳುವ ಈ ಕೃತಿಯನ್ನು ತಮಿಳುನಾಡಿನ ಜನರು ತಮಿಳು ವೇದ ಎಂದು ಗೌರವಿಸುತ್ತಾರೆ. ಸಂಸ್ಕೃತದಲ್ಲಿ ಭಗವದ್ಗೀತೆಗೆ ಇರುವ ಮಾನ್ಯತೆಯು ತಮಿಳಿನಲ್ಲಿ ತಿರುಕ್ಕುರಳ್‌ಗೆ ಇರುವುದೇ ಇದರ ಹಿರಿಮೆಗೆ ಸಾಕ್ಷಿ. ಮುಪ್ಪಾಲ್ ಎಂಬುದು ಇದರ ಪ್ರಾಚೀನ ಹೆಸರು. ಭಾರತೀಯ ತತ್ವಶಾಸ್ತ್ರದಲ್ಲಿ ಮನುಷ್ಯನ ಆತ್ಮೋನ್ನತಿಗೆ ನೆರವಾಗುವ ನಾಲ್ಕು ಪುರುಷಾರ್ಥಗಳಲ್ಲಿ ಅರಮ್, ಪೊರುಳ್, ಕಾಮಮ್ (ಇನ್ಬಮ್) ಅಂದರೆ ಧರ್ಮ, ಅರ್ಥ ಮತ್ತು ಕಾಮ ಎಂಬ ಮೂರು ಪುರುಷಾರ್ಥಗಳನ್ನು ಕುರಿತು ಇದರಲ್ಲಿ ವಿಸ್ತಾರವಾಗಿ ಹೇಳಲಾಗಿದೆ. ಈ ಮೂರು ವರ್ಗಗಳಿದ್ದುದರಿಂದಲೆ ಇದನ್ನು ಮುಪ್ಪಾಲ್ ಎಂದು ಕರೆದಿರಬಹುದು. ಮೋಕ್ಷದ ಬಗ್ಗೆ ಇವರು ಏನನ್ನೂ ಹೇಳುವುದಿಲ್ಲ. ಇದು 'ಕುರುಳ್‌ವೆಣ್ಬಾ' ಎಂಬ ಛಂದಸ್ಸಿನಲ್ಲಿ ರಚಿತವಾಗಿದೆ. ಕನ್ನಡ ನಾಡಿನಲ್ಲಿ ಹನ್ನೆರಡನೆಯ ಶತಮಾನದ ಸಂದರ್ಭದಲ್ಲಿ ಕಾಣಿಸಿಕೊಂಡ ಬಸವಾದಿ



Scanned with CamScanner